1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ, ನ್ಯಾಯಾಲಯ ಗೋಕಾಕ

ಮಿಸ್ ನಂ: 13/2025

**ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಿ.ಡಬ್ಲ್ಯು.1

| | |
|---|---|
| ಹೆಸರು | ಚೈತ್ರಾ ಹರಿಜನ |
| ಗಂಡನ ಹೆಸರು | ಮುತ್ತೆಪ್ಪ |
| ವಯಸ್ಸು | 24 ವರ್ಷ |
| ಉದ್ಯೋಗ | ಕೂಲಿ |
| ವಾಸ | ಚಿಕ್ಕನಂದಿ |

**ಹೆಚ್ಚುವರಿ ಮುಖ್ಯ ವಿಚಾರಣೆಃ ಅರ್ಜಿದಾರರ ಪರಶ್ರೀ.ಬಿ.ಕೆ. ಜೆ ವಕೀಲರಿಂದಃ**

ನಾನು ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ.

**ಪಾಟೀಸವಾಲುಃ 7 ಮತ್ತು 8 ನೇ ಎದುರುದಾರರ ಪರ ಮಾನ್ಯ ಎ.ಜಿ.ಪಿ ಯವರಿಂದಃ-**

ಯಾವ ಕಾರಣಕ್ಕಾಗಿ ಪ್ರಸ್ತುತ ಅರ್ಜಿಯನ್ನು ಮಾಡಿರುತ್ತೀರಿ? ಎಂದರೆ ನನ್ನ ಗಂಡ ವಿದ್ಯುತ್ ಸಂಪರ್ಕದ ಅಪಘಾತದಲ್ಲಿ ಮೃತಪಟ್ಟಿದ್ದು ಪರಿಹಾರಕ್ಕಾಗಿ ಅರ್ಜಿಯನ್ನು ಮಾಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಪ್ರಕರಣವನ್ನು ಯಾರ ವಿರುದ್ಧ ಮಾಡಿಕೊಂಡಿರುತ್ತೀರಿ? ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಅಪಘಾತದಲ್ಲಿ ಮೃತಪಟ್ಟಿರುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ.

3 ಮತ್ತು 4 ನೇ ಅರ್ಜಿದಾರರು ನನ್ನ ಮಾವ ಮತ್ತು ಅತ್ತೆಯಾಗಬೇಕು. ನಿಮ್ಮ ಕುಟುಂಬಕ್ಕೆ ಜಮೀನು ಇರುತ್ತದೆಯಾ? ಎಂದರೆ ಸಾಕ್ಷಿಯು ನಮ್ಮ ಮನೆತನಕ್ಕೆ

ಯಾವುದೇ ಜಮೀನು ಆಸ್ತಿ ಇರುವುದಿಲ್ಲ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ತಾಲೂಕಾ ಕಾನೂನು ಸೇವಾ ಸಮಿತಿಯವರಿಗೆ ನಾನು ಬಡವಳಿದ್ದು, ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿ , ಪರಿಹಾರ ಪಡೆದುಕೊಳ್ಳಲು ನನಗೆ ನ್ಯಾಯಾಲಯದ ಶುಲ್ಕ ತುಂಬಲು ಹಾಗೂ ಖಾಸಗಿ ವಕೀಲರನ್ನು ನೇಮಕ ಮಾಡಿಕೊಂಡು ಅವರ  ಶುಲ್ಕವನ್ನು ಸಹ ಪಾವತಿಸಲು ಆಗುವುದಿಲ್ಲ ಎಂದು ಹೇಳಿ ಅರ್ಜಿ ಮಾಡಿಕೊಂಡಿರುವುದಿಲ್ಲ.

ನಾನು ನನ್ನ ಅತ್ತೆ ಮಾವರೊಂದಿಗೆ ಬೇರೆಯಾಗಿ ವಾಸವಾಗಿದ್ದೇನೆಂದರೆ ಸರಿಯಲ್ಲ. ಹಿರೇನಂದಿ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಜಮೀನು ಹಾಗೂ ಬೇರೆ ಆಸ್ತಿಗಳು ಇದ್ದು, ಸಾಕಷ್ಟು ಆದಾಯ ಇದ್ದು, ನ್ಯಾಯಾಲಯದ ಶುಲ್ಕವನ್ನು ಭರಣಾ ಮಾಡಲು ಸಮರ್ಥರು ಇದ್ದೇವೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಖೊಟ್ಟಿ ಅರ್ಜಿಯನ್ನು ಸಲ್ಲಿಸಿ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ. ನನಗೆ ದಿನಕ್ಕೆ ಕೂಲಿಯಿಂದ ರೂ.300/- ಆದಾಯ ಇರುತ್ತದೆ. ನಮ್ಮ ಕುಟುಂಬಕ್ಕೆ ದಿನಾಲೂ ರೂ.2000/- ಆದಾಯ ಇರುತ್ತದೆಂದರೆ ಸರಿಯಲ್ಲ. ನನ್ನ ಗಂಡ ತನ್ನ ನಿಷ್ಕಾಳಜಿನತದಿಂದ ಅವಘಡ ಮಾಡಿಕೊಂಡು ಮೃತಪಟ್ಟಿದ್ದು, ಎದುರುದಾರರಿಂದ ಯಾವುದೇ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ